# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 10 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : ಶ್ರೀ ಬಿ. ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 08.12.2025 |
| ಉತ್ತರಿಸುವ ಸಚಿವರು | : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಯಾದಗಿರಿ ಜಿಲ್ಲಾ ಕ್ರೀಡಾಂಗಣ ವಸತಿ ನಿಲಯದಲ್ಲಿ ರೇಷನ್ ಅಕ್ಕಿ ಅಕ್ರಮವಾಗಿ ದಾಸ್ತಾನು ಮಾಡಿರುವುದು ಹಾಗೂ ಬಡವರಿಗೆಂದು ನೀಡುವ ಪಡಿತರ ಅಕ್ಕಿ ಹಾಗೂ ಆಹಾರ ಧಾನ್ಯಗಳನ್ನು ಕಾಳಸಂತೆಯಲ್ಲಿ ಖರೀದಿಸಿ ಜಿಲ್ಲೆಯಲ್ಲಿರುವ ವಸತಿ ನಿಯಲಗಳಿಗೆ ಪೂರೈಸುತ್ತಿರುವವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು: (ವಿವರ ನೀಡುವುದು) | ಯಾದಗಿರಿ ಜಿಲ್ಲಾ ಕ್ರೀಡಾಂಗಣ ವಸತಿ ನಿಲಯದಲ್ಲಿ ಸರ್ಕಾರದ ವಿವಿಧ ಯೋಜನೆಯಡಿ ವಿತರಿಸಲಾಗುವ 2 ಕೆ.ಜಿ ಅಕ್ಕಿ ಇರುವುದು ಕಂಡುಬಂದಿರುವುದರಿಂದ ಶ್ರೀ ಅನೀಲಕುಮಾರ ಗುತ್ತಿಗೆದಾರರು ತಾಲ್ಲೂಕು ಮಹಿಳಾ ವಿವಿದ್ಯೋದ್ದೇಶಗಳ ಸಹಕಾರ ಸಂಘ ಯಾದಗಿರಿ ಇವರಿಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿರುತ್ತದೆ.<br><br>ಸದರಿ ಗುತ್ತಿಗೆದಾರರು ಕಾರಣ ಕೇಳುವ ನೋಟೀಸ್‌ಗೆ ಉತ್ತರ ಸಲ್ಲಿಸಿದ್ದು, ಪರಿಶೀಲನೆ ಸಮಯದಲ್ಲಿ ಸಿಕ್ಕಿರುವ 2 ಕೆ.ಜಿ ಅಕ್ಕಿಯ ಕುರಿತು ನಮ್ಮಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯಾದ ಶ್ರೀ ದೇವು ಮತ್ತು ಅವರ ಪತ್ನಿಯನ್ನು ವಿಚಾರಿಸಲಾಗಿದ್ದು, ಸದರಿಯವರಿಗೆ ಬಿಪಿಎಲ್ ಪಡಿತರ ಚೀಟಿ ಇದ್ದು ಪ್ರತಿ ತಿಂಗಳು ಆಹಾರಧಾನ್ಯ ಪಡೆಯುತ್ತಿರುತ್ತಾರ ಅಲ್ಲದೆ ಶ್ರೀ ದೇವು & ಅವರ ಹೆಂಡತಿಯವರು ಅದೇ ಸ್ಥಳದಲ್ಲಿ ವಾಸವಿರುವುದಾಗಿ ಸದರಿಯವರಿಗೆ ದೈನಂದಿನ ಉಪಹಾರಕ್ಕಾಗಿ ಉಪಯೋಗಿಸಿಕೊಳ್ಳಲು ಇರಿಸಿರುವುದಾಗಿ ತಿಳಿಸಿರುತ್ತಾರೆ.<br>ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಯಾದಗಿರಿ ಇವರು ಜಿಲ್ಲಾ ಕ್ರೀಡಾ ವಸತಿ ಶಾಲೆ/ ನಿಲಯದ ಕ್ರೀಡಾಪಟುಗಳಿಗೆ ಅನುಬಂದ 1 ರ ನಿಗಧಿಪಡಿಸಿದ ಮೆನು ಪಟ್ಟಿಯ ಪ್ರಕಾರ ಆಹಾರ ಪೂರೈಕೆ ಮಾಡುವುದಾಗಿ ತಿಳಿಸಿ ಈ ಪ್ರಕರಣವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲು ಕೋರಿರುವ ಹಿನ್ನಲೆಯಲ್ಲಿ ನಿಯಮಾನುಸಾರ ಕ್ರಮವಹಿಸಲಾಗತ್ತಿದೆ. |

| | | |
|---|---|---|
| ಆ | ಜಿಲ್ಲೆಯಲ್ಲಿ ಕ್ರೀಡಾ ವಸತಿ ನಿಯಲದಲ್ಲಿನ ಮಕ್ಕಳಿಗೆ ಪ್ರೋಟೀನ್ ಯುಕ್ತ ಆಹಾರ ಧಾನ್ಯಗಳನ್ನು ಪೂರೈಸಲು ಯಾವ ಸಂಸ್ಥೆಗೆ ಟೆಂಡರ್ ನೀಡಲಾಗಿದೆ ಹಾಗೂ ಇದಕ್ಕೆ ನೀಡಿದ ಅನುದಾನ ಎಷ್ಟು: (ವಿವರ ನೀಡುವುದು) | ಯಾದಗಿರಿ ಜಿಲ್ಲೆಯಲ್ಲಿ ಒಂದು ಕ್ರೀಡಾ ವಸತಿ ನಿಲಯ ಮಾತ್ರ ಇದ್ದು, ಜಿಲ್ಲಾ ಕೇಂದ್ರವಾದ ಯಾದಗಿರಿಯಲ್ಲಿರುತ್ತದೆ. ಯಾದಗಿರಿ ಜಿಲ್ಲಾ ಕ್ರೀಡಾ ವಸತಿ ನಿಲಯದಲ್ಲಿರುವ ಕ್ರೀಡಾಪಟುಗಳಿಗೆ ಊಟೋಪಹಾರ ಒದಗಿಸಲು ತಾಲ್ಲೂಕು ಮಹಿಳಾ ವಿವಿದೋದ್ದೇಶ ಸಹಕಾರ ಸಂಘ(ನಿ), ಯಾದಗಿರಿ ಇವರಿಗೆ ದಿನಾಂಕ: 01.06.2025 ರಂದು 290 ದಿನಗಳ ಅವಧಿಗೆ ಒಬ್ಬ ಕ್ರೀಡಾಪಟುವಿಗೆ ದಿನವೊಂದಕ್ಕೆ ರೂ 201.50 ರಂತೆ ಒಟ್ಟು ರೂ 29,21,750/- ಲಕ್ಷಗಳಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. |
| ಇ | ಯಾದಗಿರಿ ಜಿಲ್ಲೆಯ ಗುರುಮಿಠಕಲ್‌ನ ಅನ್ನಭಾಗ್ಯ ಅಕ್ಕಿ ಅಕ್ರಮ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಲಾಗಿದೆಯೇ; ಸಿಐಡಿ ತನಿಖೆಗೆ ವಹಿಸಿದ್ದಲ್ಲಿ ಯಾವ ಕಾಲಮಿತಿಯಲ್ಲಿ ತನಿಖೆಯ ವರದಿ ನೀಡಬೇಕೆಂದು ಆದೇಶಿಸಿದೆ ಪ್ರಸ್ತುತ ತನಿಖೆಯು ಯಾವ ಹಂತದಲ್ಲಿದೆ; (ವಿವರ ನೀಡುವುದು) | ಯಾದಗಿರಿ ಜಿಲ್ಲೆಯ ಗುರುಮಿಠಕಲ್‌ನ ಅನ್ನಭಾಗ್ಯ ಅಕ್ಕಿ ಅಕ್ರಮ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಲಾಗಿರುತ್ತದೆ, ಸಿಐಡಿ ತನಿಖೆ ಹಂತದಲ್ಲಿ ಇರುತ್ತದೆ. |

**ಇ-ಆನಾಸ 157 ಆರ್‌ಪಿಆರ್ 2025**

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ, ಇಲಾಖಾ
ಸಚಿವರು